**A**

**CCE RF**
**CCE RR**
**REVISED**


**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**


**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2020**

**S.S.L.C. EXAMINATION, MARCH / APRIL, 2020**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 03. 04. 2020 ] **ಸಂಕೇತ ಸಂಖ್ಯೆ : 62-K**

Date : 03. 04. 2020 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 8 × 1 = 8 |
| 1. | ವ್ಯಂಜನಗಳಿಗೆ ಸ್ವರ ಸೇರಿದಾಗ ಆಗುವ ಅಕ್ಷರ<br>(ಎ) ವ್ಯಂಜನಾಕ್ಷರ (ಬಿ) ಸಂಯುಕ್ತಾಕ್ಷರ<br>(ಸಿ) ಗುಣಿತಾಕ್ಷರ (ಡಿ) ಒತ್ತಕ್ಷರ<br>***ಉತ್ತರ :*** (ಸಿ) ಗುಣಿತಾಕ್ಷರ | |
| 2. | ಕೇಳುಗರಿಗೆ ಅಥವಾ ಓದುಗರಿಗೆ ಆಕರ್ಷಣೀಯವಾಗಿ ಮಾಡಲು ಭಾಷೆಯಲ್ಲಿ ಬಳಸುವ ಚಮತ್ಕಾರದ ಮಾತು<br>(ಎ) ಅಲಂಕಾರ (ಬಿ) ಛಂದಸ್ಸು<br>(ಸಿ) ವ್ಯಾಕರಣ (ಡಿ) ವಿಭಕ್ತಿಗಳು<br>***ಉತ್ತರ :*** (ಎ) ಅಲಂಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಹುಡುಗ, ಹಸು, ಮಕ್ಕಳು, ಹುಡುಗಿ – ಇವುಗಳಲ್ಲಿ ಗುಂಪಿಗೆ ಸೇರದ ಪದ<br>(ಎ) ಹುಡುಗ (ಬಿ) ಹಸು<br>(ಸಿ) ಮಕ್ಕಳು (ಡಿ) ಹುಡುಗಿ<br>***ಉತ್ತರ :*** (ಸಿ) ಮಕ್ಕಳು | |
| 4. | 'ಸುರೇಂದ್ರ' – ಇದು ಈ ಸಂಧಿಗೆ ಉದಾಹರಣೆ<br>(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ<br>(ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ<br>***ಉತ್ತರ :*** (ಬಿ) ಗುಣ ಸಂಧಿ | |
| 5. | ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ<br>(ಸಿ) ಭಾವಸೂಚಕ ಚಿಹ್ನೆ (ಡಿ) ಆವರಣ ಚಿಹ್ನೆ<br>***ಉತ್ತರ :*** (ಡಿ) ಆವರಣ ಚಿಹ್ನ | |
| 6. | 'ಕವಿ' – ಶಬ್ದದ ತದ್ಭವ ರೂಪ<br>(ಎ) ಕಬ್ಬಿಗ (ಬಿ) ಕಬ್ಬ<br>(ಸಿ) ಕಾವ (ಡಿ) ಕಗ್ಗ<br>***ಉತ್ತರ :*** (ಎ) ಕಬ್ಬಿಗ | |
| 7. | ಇವುಗಳಲ್ಲಿ ಪೋರ್ಚುಗೀಸ್ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುವ ಶಬ್ದ<br>(ಎ) ಭೂಮಿ (ಬಿ) ಮೈಲು<br>(ಸಿ) ರಸ್ತೆ (ಡಿ) ಮೇಜು<br>***ಉತ್ತರ :*** (ಡಿ) ಮೇಜು | |
| 8. | 'ಕೈಯನ್ನು + ಮುಗಿ = ಕೈಮುಗಿ' – ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಕ್ರಿಯಾ ಸಮಾಸ (ಬಿ) ಅಂಶಿ ಸಮಾಸ<br>(ಸಿ) ದ್ವಂದ್ವ ಸಮಾಸ (ಡಿ) ಗಮಕ ಸಮಾಸ<br>***ಉತ್ತರ :*** (ಎ) ಕ್ರಿಯಾ ಸಮಾಸ | |
| II. | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | $4 \times 1 = 4$ |
| 9. | ಕುಲಕರ್ಣಿಯ ಕೈಯಲ್ಲಿ : ಪಿಸ್ತೂಲು :: ರಾಮ್‌ಸಿಂಗನ ಕೈಯಲ್ಲಿ : ........................ .<br>***ಉತ್ತರ :*** ಧ್ವಜ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಕೆಳದಿ ಸಂಸ್ಥಾನ : ಚೆನ್ನಮ್ಮ :: ಬೆಳವಡಿ ಸಂಸ್ಥಾನ : ......................... .<br>***ಉತ್ತರ :*** ಮಲ್ಲಮ್ಮ | |
| 11. | ಮರ್ತ್ಯಲೋಕ : ಮಿಥ್ಯವ ನುಡಿವುದು :: ದೇವಲೋಕ : ......................... .<br>***ಉತ್ತರ :*** ಸತ್ಯವ ನುಡಿವುದು | |
| 12. | ಜಪಮಣಿಯು : ಕರದಲ್ಲಿ :: ಮಂತ್ರವು : ......................... .<br>***ಉತ್ತರ :*** ಬಾಯಲ್ಲಿ | |
| III. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 4 × 1 = 4 |
| 13. | ಮಿನಿಪೊಲೀಸ್ ನಗರಕ್ಕೆ ಹೋದಾಗ ಗೊರೂರರ ಜೇಬಿನಲ್ಲಿ ಏನಿತ್ತು ?<br>***ಉತ್ತರ :***<br>ಮಿನಿಪೊಲೀಸ್ ನಗರಕ್ಕೆ ಹೋದಾಗ ಗೊರೂರರ ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು ಎರಡು ಡಾಲರು ಹಣ ಮಾತ್ರವಿತ್ತು. | |
| 14. | ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ?<br>***ಉತ್ತರ :***<br>ಸ್ವಾತಿ ಮಳೆ ಸುರಿದರೆ ಕೆರೆಗಳು ತುಂಬುತ್ತವೆ. | |
| 15. | 'ಹೀಗೊಂದು ಟಾಪ್ ಪ್ರಯಾಣ' – ಈ ಲೇಖನವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?<br>***ಉತ್ತರ :***<br>'ಹೀಗೊಂದು ಟಾಪ್ ಪ್ರಯಾಣ' – ಈ ಲೇಖನವು ಲಲಿತ ಪ್ರಬಂಧ ಸಾಹಿತ್ಯ ಪ್ರಕಾರಕ್ಕೆ ಸೇರಿದೆ. | |
| 16. | ಕೊನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಿದವನು ಯಾರು ?<br>***ಉತ್ತರ :***<br>ಕೊನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಿದವನು ಧರ್ಮಪದ/ಮುಕುಂದ. | |
| IV. | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 8 × 2 = 16 |
| 17. | ಹಂಡತಿ ಹಾಗೂ ಮಗಳನ್ನು ಕಳೆದುಕೊಂಡ ಶರೀಫರು ತಮ್ಮ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆ ಹೇಗೆ ?<br>***ಉತ್ತರ :***<br>ಹೆಂಡತಿ ಹಾಗೂ ಮಗಳನ್ನು ಕಳೆದುಕೊಂಡರೂ ಧೃತಿಗೆಡದ ಶರೀಫರು ತಮಗಾದ ದುಃಖವನ್ನು ಸಾಧು, ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಹಾಗೂ ಉಪಾಸನೆಗಳ ಮೂಲಕ ತಮ್ಮ ಹೃದಯಕ್ಕಾದ ಪೆಟ್ಟನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮರೆಯಲು ಹವಣಿಸುತ್ತಿದ್ದರು. ಮನೆಯ ಮಗ್ಗುಲಿನ ಕಟ್ಟೆಯ ಮೇಲೆ ಕುಳಿತು ಅಧ್ಯಾತ್ಮ–ಸುಬೋಧ, ಧರ್ಮ–ನೀತಿಗಳನ್ನು ಬೋಧಿಸುವ ಹವ್ಯಾಸದಿಂದ ದುಃಖವನ್ನು ದೂರಮಾಡಿಕೊಂಡರು. | |
| 18. | ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳು ಯಾವುವು ? | |
| | ***ಉತ್ತರ :*** | |
| | ಕೊಡಗಿನ ಗೌರಮ್ಮನವರು ಸುತ್ತಮುತ್ತಲಿನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾ ಲೋಕದ ಕನಸುಗಳ, ಆದರ್ಶಗಳ ಚಿತ್ರಣವನ್ನು ತಮ್ಮ ಬರವಣಿಗೆಗಳಲ್ಲಿ ನೀಡಲು ಪ್ರಯತ್ನಿಸಿದರು. ಅವರ ಇಪ್ಪತ್ತೊಂದು ಕಥೆಗಳಲ್ಲಿಯೂ ಎಲ್ಲಾ ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜವೊಂದರ ನಿರ್ಮಾಣದ ಶಕ್ತಿಯಿರುವುದು ಪ್ರತಿಬಿಂಬಿತವಾಗಿದೆ. | |
| 19. | ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯವು ಹೇಗೆ ಬೆರೆತಿತ್ತು ? | |
| | ***ಉತ್ತರ :*** | |
| | ಶರೀಫರಿಗೆ ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ. ಅಭಿನಯದಲ್ಲೂ ತುಂಬ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಮುಂತಾದ ಬಯಲಾಟಗಳಲ್ಲಿ ಪಾತ್ರವಹಿಸಿ, ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಜಾತ್ರೆ, ಉತ್ಸವ ಮೊದಲಾದುವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮವು ಮುಸ್ಲಿಂ ಕುಟುಂಬದಲ್ಲಾದರೂ ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯವು ಬೆರೆತು ಹೋಯಿತು. | |
| 20. | 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಯಾವ ರೀತಿ ಪ್ರಭಾವ ಬೀರಿತು ? | |
| | ***ಉತ್ತರ :*** | |
| | ಬೀಚಿಯವರ ಅಣ್ಣ ಆದ್ಯ ರಂಗಾಚಾರ್ಯರಾಗಿರುವ ಪ್ರೊ. ಜಹಗೀರದಾರರು ವಿಶ್ವಾಮಿತ್ರ ಸೃಷ್ಟಿಯ ಎರಡು ಸಂಪುಟಗಳನ್ನು ತಂದುಕೊಟ್ಟರು. 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರನ್ನು ಬಹುಬೇಗ ಸೆರೆಹಿಡಿಯಿತು. ಆದ್ಯ ರಂಗಾಚಾರ್ಯರ ಮಾತಿನ ಚಮತ್ಕಾರ, ವಿಚಾರ ಮಂಡನೆ ಮುಂತಾದ ಕಲಾಕುಶಲತೆಗೆ ಇವರು ಮಾರುಹೋದರು. ಆಚಾರ್ಯರ ಈ ಕೃತಿ ಬೀಚಿಯವರ ಮೇಲೆ ಅತ್ಯಂತ ಪ್ರಭಾವಬೀರಿ ಅವರ ತಲೆಯನ್ನೇ ಗೆದ್ದಿತು. | |
| 21. | ಆಂಗ್ಲರು, ಆಫ್ರಿಕನ್ನರು ಮತ್ತು ಅಕ್ಕಿ, ರಾಗಿ – ಇವುಗಳನ್ನು ನಿಸಾರ್ ಅಹಮದ್‌ರು ಏಕೆ ನಿದರ್ಶನವಾಗಿ ಬಳಸಿದ್ದಾರೆ ? | |
| | ***ಉತ್ತರ :*** | |
| | ಆಂಗ್ಲರ ಮೈಬಣ್ಣ ಬಿಳಿ, ಆಫ್ರಿಕನ್ನರ ಮೈಬಣ್ಣ ಕಪ್ಪು. ಅವರಿಬ್ಬರಲ್ಲೂ ಹರಿಯುವ ರಕ್ತದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಣ್ಣ ಮಾತ್ರ ಕೆಂಪು. ಅಂತೆಯೇ ಅಕ್ಕಿಯ ಬಣ್ಣ ಬಿಳಿ, ರಾಗಿಯ ಬಣ್ಣ ಕಪ್ಪು. ಅವೆರಡನ್ನೂ ಬೆಳೆಯುವ ಹುಲ್ಲಿನ ಬಣ್ಣ ಮಾತ್ರ ಹಸಿರು. ಹೀಗೆ ಹೊರನೋಟಕ್ಕೆ ಬೇರೆಬೇರೆಯಾಗಿ ಕಂಡರೂ ಭೂಮಿತಾಯಿಯ ಕುಡಿಗಳ ಜೀವರಸ ಒಂದೇ ಆಗಿದೆ ಎಂದು ತಿಳಿಸಲು ನಿಸಾರ್ ಅಹಮದ್‌ರು ಆಂಗ್ಲರು, ಆಫ್ರಿಕನ್ನರು ಮತ್ತು ಅಕ್ಕಿ, ರಾಗಿ – ಇವುಗಳನ್ನು ನಿದರ್ಶನವಾಗಿ ಬಳಸಿದ್ದಾರೆ. | |
| 22. | 'ಹಿರಿಬಾಳುಗಳ ಪಳೆಯುಳಿಕೆ' ಎಂದು ಸಿ.ಪಿ.ಕೆ.ಯವರು ಯಾವುದನ್ನು ಕರೆದಿದ್ದಾರೆ ? ಏಕೆ ? | |
| | ***ಉತ್ತರ :*** | |
| | 'ಹಿರಿಬಾಳುಗಳ ಪಳೆಯುಳಿಕೆ' ಎಂದು ಸಿ.ಪಿ.ಕೆ. ಅವರು ಗ್ರಂಥಾಲಯವನ್ನು ಕರೆದಿದ್ದಾರೆ. ಅಲ್ಲಿ ಜ್ಞಾನ ಹಾಗೂ ವಯಸ್ಸಿನಲ್ಲಿ ಹಿರಿಯರಾದವರ ಅನುಭವಗಳನ್ನು ಬರೆದ ಪುಸ್ತಕಗಳು ಇರುತ್ತವೆ. ಆ ಹಿರಿಯರು ಇಂದು ನಮ್ಮೆದುರು ಇಲ್ಲದಿದ್ದರೂ ಅವರ ವಿಚಾರಧಾರೆಗಳು ಪಳೆಯುಳಿಕೆಗಳಾಗಿ ಈ ಗ್ರಂಥಗಳಿವೆಯೆಂದು ಬಣ್ಣಿಸಲು ಗ್ರಂಥಾಲಯವನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದಿದ್ದಾರೆ. | |
| 23. | ಮೋಡಗಳನ್ನು ಕಂಡು ರೈತನು ಹೇಗೆ ಸಂತೋಷಪಡುತ್ತಾನೆ ? | |
| | ***ಉತ್ತರ :*** | |
| | ಮಳೆಯಿಲ್ಲದೆ ಕಂಗಾಲಾದ ರೈತನು ಮೂಡಣದಲ್ಲಿ ಮೂಡುತ್ತಿರುವ ಮೋಡದ ಚಂದವನ್ನು ಇತರರಿಗೆ ಕರೆದು ಕರೆದು ತೋರಿಸುತ್ತಾನೆ. ಗೋಡೆಗೆ ಬಳಿದ ಕಪ್ಪು ಬಣ್ಣದಂತೆ ಅವು ಮಳೆ ಸುರಿಸಲು ಸಜ್ಜಾಗಿವೆಯೆಂದು ಹಿಗ್ಗುತ್ತಾನೆ. ಅಲ್ಲದೆ ಆಗಸದಿಂದ ಮಳೆರಾಯನು ಭೋರ್ಗರೆಯುತ್ತಾ ಮಳೆಯನ್ನು ಸುರಿಯುತ್ತಾನೆ ಎಂದು ರೈತನು ಮೋಡಗಳನ್ನು ಕಂಡು ಸಂತೋಷಪಡುತ್ತಾನೆ. | |
| 24. | ಯಾವ ಗುಣವಿರುವವರು ಯಾವ ಹೆಸರಿಗೆ ಅರ್ಹರೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ ? | |
| | ***ಉತ್ತರ :*** | |
| | ಪುಲಿಗೆರೆ ಸೋಮನಾಥನು ಹೇಳಿರುವಂತೆ ವಿನಯಶಾಲಿಯು ಮಗನು, ಪರಿಶುದ್ಧನು ಮುನಿಯು, ಪತಿಯನ್ನು ನಿಂದಿಸದವಳು ಪತ್ನಿಯು, ರುಚಿಯುಳ್ಳ ಅನ್ನದ ಊಟವೇ ಊಟವು, ಕೆಟ್ಟವರ ಸಹವಾಸವನ್ನು ಮಾಡದೇ ಇರುವವನೇ ದೊಡ್ಡ ಮನುಷ್ಯನು, ಯುದ್ಧಕ್ಕೆ ಸಿದ್ಧನಿರುವವನೇ ಭಟನು, ಕಷ್ಟಕಾಲದಲ್ಲಿ ಸಹಾಯ ಮಾಡುವವನೇ ನೆಂಟನು ಹಾಗೂ ಶಿವನನ್ನು ನಂಬಿದವನೇ ಆಚಾರವಂತನೆಂಬ ಹೆಸರಿಗೆ ಅರ್ಹರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| V. | **ಸಂದರ್ಭಸಹಿತ ವಿವರಣೆ :** | 2 × 3 = 6 |
| | ಪಠ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ಓದಬೇಕಾದುದು ಬಹಳ ಜಾಸ್ತಿ ಇದೆ. ಆಯುಷ್ಯ ಮಾತ್ರ ಬಹಳ ಕಡಿಮೆ ಇದೆ."<br>***ಉತ್ತರ :***<br>"ಓದಬೇಕಾದುದು ಬಹಳ ಜಾಸ್ತಿ ಇದೆ. ಆಯುಷ್ಯ ಮಾತ್ರ ಬಹಳ ಕಡಿಮೆ ಇದೆ." ಎಂಬ ಈ ಮಾತನ್ನು 'ಬೀಚಿ'ಯವರ 'ನನ್ನ ಭಯಾಗ್ರಫಿ' ಕೃತಿಯಿಂದ ಆರಿಸಲಾದ 'ನನ್ನ ಪುಸ್ತಕ ಪ್ರಪಂಚ' ಪಾಠದಿಂದ ಆರಿಸಲಾಗಿದೆ.<br>ಬೀಚಿಯವರು 'ಸಂಧ್ಯಾರಾಗ'ದಿಂದ ಪ್ರೇರಿತರಾಗಿ ಅನೇಕ ಕನ್ನಡ ಪುಸ್ತಕಗಳನ್ನು ಓದಿದರು. 'ಅಂದನಾ ತಿಂಮ' ಮೊದಲಾದ ಕೃತಿಗಳನ್ನು ರಚಿಸಿದರು. ಆದರೂ ಕಾರಂತರ 'ಮರಳಿ ಮಣ್ಣಿಗೆ'ಯಂತಹ ಅನೇಕ ಪುಸ್ತಕಗಳನ್ನು ತಾನು ಓದಬೇಕಾಗಿದೆ ಎನ್ನುವಾಗ ಈ ಮಾತನ್ನು ಹೇಳಿದರು.<br>ಕನ್ನಡದ ಬಗ್ಗೆ ತಾತ್ಸಾರ ಭಾವನೆ ಹೊಂದಿದ್ದ ಬೀಚಿ ಕೊನೆಯಲ್ಲಿ ಕನ್ನಡದ ಬಗ್ಗೆ ಅಭಿಮಾನ ಮೂಡಿಸಿಕೊಂಡಿರುವುದರ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಓದಲೇಬೇಕಾದ ಗ್ರಂಥಗಳು ಅಧಿಕವಾಗಿವೆ ಎಂಬ ಭಾವನೆಯನ್ನು ವ್ಯಕ್ತಪಡಿಸಿರುವುದು ಇಲ್ಲಿನ ಸ್ವಾರಸ್ಯಕರವಾಗಿದೆ. | |
| 26. | "ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು"<br>***ಉತ್ತರ :***<br>"ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು" ಎಂಬ ಈ ಸಾಲನ್ನು 'ಸಿ.ಪಿ.ಕೆ.'ಯವರ 'ಅನಂತ ಪೃಥ್ವಿ' ಕವನಸಂಕಲನದಿಂದ ಆರಿಸಲಾದ 'ಗ್ರಂಥಾಲಯದಲ್ಲಿ' ಎಂಬ ಪದ್ಯದಿಂದ ಆರಿಸಲಾಗಿದೆ.<br>ಕವಿಯು ಪುಸ್ತಕಾಲಯದಲ್ಲಿ ಬಂದು ನಿಂತಾಗ ಕಣ್ಣು ಹಾಯಿಸಿದಷ್ಟೂ ಪುಸ್ತಕಗಳು, ಪರ್ವತದ ಸಾಲುಗಳಂತೆ ಕಾಣಿಸುತ್ತವೆ ಎಂದು ಹೇಳುವಾಗ ಈ ಸಾಲನ್ನು ಬಳಸಿದ್ದಾರೆ.<br>ಪುಸ್ತಕಾಲಯದಲ್ಲಿ ಗಿರಿಪಂಕ್ತಿಯ ರೀತಿಯಲ್ಲಿ ಇರುವ ಗ್ರಂಥರಾಶಿಯನ್ನು ನೋಡಿದಾಗ ಮನದಲ್ಲಿ ಮೂಡುವ ಭಾವನೆಯ ವರ್ಣನೆ ಸ್ವಾರಸ್ಯಕರವಾಗಿದೆ. | |
| VI. | **ಐದು–ಆರು ವಾಕ್ಯಗಳಲ್ಲಿ ಉತ್ತರಿಸುವುದು :** | 4 × 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಕೊಡಗಿನ ಗೌರಮ್ಮನವರನ್ನು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರೆಂದು ಏಕೆ ಹೇಳುತ್ತಾರೆ ?<br>***ಉತ್ತರ :***<br>ಕೊಡಗಿನ ಗೌರಮ್ಮನವರು ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ, ಮಾನವೀಯ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ, ಅಪಾರ ಜೀವನಪ್ರೀತಿಯ ಕಥೆಗಾರ್ತಿ ಆಗಿದ್ದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಸೂಕ್ಷ್ಮವಾಗಿ ಗ್ರಹಿಸಿದ್ದರು. ಸಮಾಜದಲ್ಲಿನ ಕ್ರೌರ್ಯದ ನಾನಾ ಮುಖಗಳ ಅನಾವರಣವನ್ನು ಅವರು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ತುಂಬ ಕಾಳಜಿ ಹೊಂದಿದ್ದರು. ಹೀಗೆ ಗೌರಮ್ಮ ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು. | |
| 28. | ಕಿತ್ತೂರಿನ ರಾಣಿ ಚೆನ್ನಮ್ಮಾಳ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಏಕೆ ಮೆಚ್ಚುವಿರಿ ?<br>***ಉತ್ತರ :***<br>ಬೆಳಗಾವಿಯ ಕಿತ್ತೂರು ಚೆನ್ನಮ್ಮಾಳು ಬಲಾಢ್ಯ ಬ್ರಿಟಿಷರನ್ನು ಸೋಲಿಸಿದವಳು. ಸೆರೆಯಾಳುಗಳಾದ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ ಇವಳು. ಮದ್ದಿನಲ್ಲಿ ಸೆಗಣಿ ಸೇರಿಸಿ ತೋಪು ಹಾರದಂತೆ ಮಾಡಿದ ಹಿತಶತ್ರುಗಳ ಪಿತೂರಿಯಿಂದ ಈಕೆಯನ್ನು ಸೆರೆಯಲ್ಲಿ ಇಟ್ಟಾಗಲೂ ಸ್ವಾತಂತ್ರ್ಯದ ಕನಸನ್ನೇ ಕಂಡವಳು ಈ ವೀರರಾಣಿ. ಸೆರೆಮನೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣನು 'ತಾಯಿ' ಎಂದಾಗ "ತಾಯಿ, ಎಂದು ಕರೆದ ಕನ್ನಡದ ಕಂದ ಯಾರು ?" ಎಂದು ಕೇಳಿದ ಕೆಚ್ಚಿನ ರಾಣಿಯೀಕೆ. "ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣವಿರುವವರೆಗೂ ವೀರರಾಗಿ ಹೋರಾಡಿ" ಎಂದು ಹುರಿದುಂಬಿಸಿದ ಈಕೆಯು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಹಳೆ ಊದಿದ್ದಳು. ಇಂತಹ ಕಿತ್ತೂರಿನ ರಾಣಿ ಚೆನ್ನಮ್ಮಾಳ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಮೆಚ್ಚಲೇಬೇಕು. | |
| 29. | ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವ ವಿಧಾನಗಳು ಬಸವಣ್ಣನವರ ವಚನದಲ್ಲಿ ಹೇಗೆ ವ್ಯಕ್ತವಾಗಿವೆ ?<br>***ಉತ್ತರ :***<br>ಬಸವಣ್ಣನವರ ವಚನಗಳಲ್ಲಿ ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವ ವಿಧಾನಗಳು–ಕಳ್ಳತನ ಮಾಡಬಾರದು, ಇತರ ಪ್ರಾಣಿಗಳನ್ನು ಹಿಂಸಿಸಬಾರದು ಹಾಗೂ ಕೊಲ್ಲಬಾರದು, ಸುಳ್ಳನ್ನು ನುಡಿಯಬಾರದು, ಕೋಪಗೊಳ್ಳಬಾರದು, ಅನ್ಯರನ್ನು ಕಂಡು ಹೇಸಿಗೆಪಡಬಾರದು, ತನ್ನನ್ನು ತಾನು ಹೊಗಳಿಕೊಳ್ಳಬಾರದು, ಹಾಗೂ ಇತರರನ್ನು ಎದುರು ಎದುರಿಗೆ ದೂಷಿಸಬಾರದು. | |
| 30. | ಡಾಂಭಿಕ ಭಕ್ತಿಯ ಆರಾಧಕರನ್ನು ಪುರಂದರದಾಸರು ಹೇಗೆ ಅಣಕಿಸಿದ್ದಾರೆ ?<br>***ಉತ್ತರ :***<br>ಡಾಂಭಿಕ ಭಕ್ತಿಯ ಆರಾಧಕರು ಭಗವಂತನಲ್ಲಿ ಸ್ವಲ್ಪವೂ ಭಕ್ತಿಯಿಲ್ಲದೆ ಉದಯಕಾಲದಲ್ಲೇ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನದಿಯಲ್ಲಿ ಸ್ನಾನ ಮಾಡಿ, ಗಡಗಡ ನಡುಗುತ್ತ. ಮನದಲ್ಲಿ ಮದ, ಮತ್ಸರ ತುಂಬಿಕೊಂಡೇ ಬದಿಯಲ್ಲಿದ್ದವರಿಗೆ ಅಚ್ಚರಿಯಾಗುವಂತೆ ನಡೆದುಕೊಳ್ಳುತ್ತಾರೆ. ಕಂಚುಗಾರನ ಮನೆಯಲ್ಲಿ ಮಾರಾಟಕ್ಕೆ ವೈವಿಧ್ಯಮಯವಾಗಿ ಜೋಡಿಸಿಟ್ಟಿರುವ ಮೂರ್ತಿಗಳಂತೆ ಪ್ರತಿಮೆಗಳನ್ನು ಹಲವು ದೀಪಗಳಿಂದ ಹೊಳೆಯುವಂತೆ ಮಾಡಿ ವಂಚನೆಯಿಂದ ಪೂಜೆ ಮಾಡುತ್ತಾರೆ. ಪರಮ ವಿರಾಗಿಯಂತೆ ಬಾಯಲ್ಲಿ ಮಂತ್ರ ಹೇಳುತ್ತ, ಮನದಲ್ಲಿ ಮಾತ್ರ ಪರಸತಿಯ ಗುಣಗಾನ ಮಾಡುತ್ತಾರೆ. ಹೊಟ್ಟೆಪಾಡಿಗಾಗಿ ನಾಟಕಸ್ತ್ರೀಯಂತೆ ಭಕ್ತನ ವೇಷವನ್ನು ತೊಡುತ್ತಾರೆ ಎಂದು ಪುರಂದರದಾಸರು ಅಣಕಿಸಿದ್ದಾರೆ. | |
| VII. | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಪ್ರೊ।। ಎಸ್.ಆರ್. ರೋಹಿಡೇಕರ್<br>***ಉತ್ತರ :***<br>ಪ್ರೊ।। ಎಸ್.ಆರ್. ರೋಹಿಡೇಕರ್ ಅವರು ೧೯೧೫ ರ ಸೆಪ್ಟೆಂಬರ್ ೧೫ ರಂದು ವಿಜಯಪುರದಲ್ಲಿ ಜನಿಸಿದರು. ಇವರ ಕಾವ್ಯನಾಮ 'ಶಾಮ್ ರೋಹಿಡೆ'. ಇವರ ಕೃತಿ 'ಮೂರು ಏಕಾಂಕ ನಾಟಕಗಳು' | |
| 32. | ಪ್ರೊ।। ಕೆ.ಎಸ್. ನಿಸಾರ್ ಅಹಮದ್<br>***ಉತ್ತರ :***<br>ಪ್ರೊ।। ಕೆ.ಎಸ್. ನಿಸಾರ್ ಅಹಮದ್ ಅವರು ೧೯೩೬ ರ ಫೆಬ್ರವರಿ ೫ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಇವರ ಕೃತಿಗಳು 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಅನಾಮಿಕ ಆಂಗ್ಲರು', 'ನವೋಲ್ಲಾಸ', 'ಹಕ್ಕಿಗಳು', 'ಸಮಗ್ರ ಕವಿತೆಗಳು'. | |
| VIII. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| 33. | ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ<br>***ಅಥವಾ***<br>ಬೆಳೆಯುವ ಪೈರು ಮೊಳಕೆಯಲ್ಲಿ | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IX. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಗೊರೂರರು ಮಿನಿಪೊಲೀಸ್ ನಗರದಲ್ಲಿ ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ಅಮೆರಿಕಾದ ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳು ಯಾವುವು ? ವಿವರಿಸಿ.<br>***ಉತ್ತರ :***<br>ಗೊರೂರರು ಅಮೆರಿಕಾದ ಮಿನಿಪೊಲೀಸ್ ನಗರಕ್ಕೆ ಒಬ್ಬ ಮಿತ್ರರನ್ನು ನೋಡಲು ಹೋಗಿದ್ದರು. ಆದರೆ ಆ ಮಿತ್ರರು ಅಲ್ಲಿರಲಿಲ್ಲ. ಅವರ ಪರಿಚಿತರೊಬ್ಬರು ಸಿಕ್ಕಿ ಗೊರೂರರನ್ನು ತಮ್ಮ ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟರು. ಗೊರೂರರು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು, ನೀವು ಹಿಂದಿರುಗುವಾಗ ರಾತ್ರಿ ಎರಡು ಗಂಟೆಗೆ ತನ್ನನ್ನು ಕರೆದೊಯ್ಯುವಂತೆ ಹೇಳಿದ್ದರು. ರಾತ್ರಿ ದೀಪ ಹೊತ್ತಿ ನಗರವು ಅಲಂಕೃತಗೊಂಡಿತು. ಗೊರೂರರು ನಗರದಲ್ಲಿ ಅಲ್ಲಲ್ಲಿ ಸುತ್ತುತ್ತ ತನಗರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ದೀಪಾಲಂಕಾರ – ಇವನ್ನೆಲ್ಲ ನೋಡುತ್ತ ಗೊತ್ತು ಮಾಡಿದ ಸ್ಥಳವನ್ನು ಬಿಟ್ಟು ಆಚೀಚೆ ಹೊರಟು ಹೋದರು. ಅನಂತರ ಏನು ಮಾಡಿದರೂ ಆ ಸ್ಥಳವು ಸಿಗಲಿಲ್ಲ. ಹೀಗೆ ಗೊರೂರು ಮಿನಿಪೊಲೀಸ್ ನಗರದಲ್ಲಿ ಹಾದಿ ತಪ್ಪಿಸಿಕೊಂಡರು. ಟ್ರಾಫಿಕ್ ಪೊಲೀಸರ ಸಹಾಯಪಡೆದು ರಾತ್ರಿಯನ್ನು ನಿಶ್ಚಿಂತರಾಗಿ ಕಳದರು. ಬೆಳಗಾದ ನಂತರ ತಮ್ಮ ಮಿತ್ರರ ಮನೆಯನ್ನು ಸೇರಿದರು.<br>**ಅಥವಾ**<br>ಗೊರೂರರು ಅಮೆರಿಕಾದ ಮಿನಿಪೊಲೀಸ್ ನಗರಕ್ಕೆ ಒಬ್ಬ ಮಿತ್ರರನ್ನು ನೋಡಲು ಹೋಗಿದ್ದರು ಆದರೆ ಅಲ್ಲಿ ಅವರು ಇರಲಿಲ್ಲ. ಪರಿಚಿತರೊಬ್ಬರ ಕಾರಿನಲ್ಲಿ ಹೊರಟು ಒಂದೆಡೆ ಇಳಿದು 'ಹಿಂದಿರುಗುವಾಗ ಕರೆದುಕೊಂಡು ಹೋಗಬೇಕೆಂದು ಹೇಳಿದ್ದರು. ಆದರೆ ನಗರ ಸುತ್ತುವ ಭರದಲ್ಲಿ ಆ ಸ್ಥಳವೂ ಸಿಗಲಿಲ್ಲ. ಮಿತ್ರನ ವಿಳಾಸವಿದ್ದ ಕೈಚೀಲವೂ ಕಾರಿನಲ್ಲೇ ಉಳಿದಿತ್ತು. ಅಲ್ಲಿಯ ಚಳಿ ತಡೆಯಲು ಬೆಚ್ಚಗಿನ ಬಟ್ಟೆಯೂ ಬಳಿಯಲ್ಲಿರಲಿಲ್ಲ. ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು ಎರಡು ಡಾಲರು ಹಣ ಮಾತ್ರ ಇದ್ದವು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೋಟೆಲಿನಲ್ಲಿ ಉಳಿಯುವಷ್ಟು ಹಣವೂ ಇರಲಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ತಂಗುವಂತೆಯೂ ಇರಲಿಲ್ಲ ಹಾಗೆ ತಂಗಿದರೆ 'ಅಲೆಮಾರಿ'ಗಳೆಂದು ಲಾಕಪ್‌ಗೆ ಹಾಕುತ್ತಾರೆ. ಅನಿವಾರ್ಯವಾಗಿ ಟ್ರಾಫಿಕ್ ಪೊಲೀಸ್‌ರ ಸಹಾಯ ಕೇಳಿದಾಗ ರಾತ್ರಿ ಲಾಕಪ್‌ನಲ್ಲಿ ಮಲಗಬೇಕಾಯಿತು. ಹೀಗೆ ಗೊರೂರರಿಗೆ ಮಿನಿಪೊಲೀಸ್ ನಗರದಲ್ಲಿ ಅನೇಕ ಸಮಸ್ಯೆಗಳು ಎದುರಾದವು. | |
| X. 35. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಕ್ರಾಂತಿ ಕೆಂಡದ<br>..............................................................<br>..............................................................<br>..............................................................<br>............................................... ಬರೆಯತೇವ<br>***ಅಥವಾ***<br>ಜಾತಿ ಇಲ್ಲದ<br>..............................................................<br>..............................................................<br>..............................................................<br>..............................................................<br>ನಾವು ನಾಡ ಕಟ್ಟತೇವ<br>***ಉತ್ತರ :***<br>ಕ್ರಾಂತಿ ಕೆಂಡದ<br>ಕುಂಡ ಹೊತ್ತು ನಾವು<br>ಮುಳ್ಳು ತುಳಿಯತೇವ<br>ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ<br>ನೆಲಕ ಹಾಡ ಬರೆಯತೇವ ॥<br>**ಅಥವಾ**<br>ಜಾತಿ ಇಲ್ಲದ<br>ಭೀತಿ ಇಲ್ಲದ<br>ಬಾಳ ಕಟ್ಟತೇವ<br>ಕುಲವೆನ್ನದ ಮನುಕುಲವ<br>ನಾವು ಕಟ್ಟತೇವ<br>ನಾವು ನಾಡ ಕಟ್ಟತೇವ ॥ | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 1 × 4 = 4 |
| | "ಗೆಳೆಯರು ಯಾರೆಂದು ತಿಳಿದರೆ ವ್ಯಕ್ತಿಯು ಎಂಥವನೆಂದು ತಿಳಿಯಬಹುದು" ಎಂಬುದು ಹಿರಿಯರ ನುಡಿ. ಗೆಳೆತನದಲ್ಲಿ ಜಾತಿ–ಭೇದಗಳಿಲ್ಲ; ಮೇಲು–ಕೀಳುಗಳಿಲ್ಲ. ಅಲ್ಲಿ ಎಲ್ಲವೂ ಸಮಾನ. ಆ ಮಧುರ ಸಂಬಂಧವು ಸೀಮಾತೀತವಾದುದು. ಬದುಕಿನಲ್ಲಿ ಉತ್ತಮ ಗೆಳೆಯನ ಸಂಪಾದನೆಯು ಒಂದು ಸುಕೃತ ಫಲ. ಅಂತಹ ಗೆಳೆತನವು ನಮ್ಮನ್ನು ನೋವು–ಸಂಕಟಗಳಿಂದ ದೂರವಿಡುತ್ತದೆ, ಒಳ್ಳೆಯ ಕೆಲಸಕ್ಕೆ ಸದಾ ಪ್ರೇರಣೆ ನೀಡುತ್ತದೆ. ಗೆಳೆತನದಲ್ಲಿ ಹೇಳಿದ ಗುಟ್ಟು ಎಂದಿಗೂ ಗುಟ್ಟಾಗಿಯೇ ಇರುತ್ತದೆ. ಸನ್ಮಿತ್ರನು ಆಪತ್ತಿನಲ್ಲಿ ಸಹಾಯ ಮಾಡುತ್ತಾನೆ. ಅವಶ್ಯಕತೆ ಇದ್ದಾಗ ವಸ್ತು, ಹಣ ಮುಂತಾದವುಗಳನ್ನು ಒದಗಿಸುತ್ತಾನೆ. ಇಂತಹ ಗೆಳೆತನದಲ್ಲಿ ಪರಸ್ಪರ ಕೊಡುಕೊಳ್ಳುವಿಕೆ ಅತ್ಯಗತ್ಯವಾಗಿರುತ್ತದೆ. | |
| 36. | ಎ) ಹಿರಿಯರ ನುಡಿ ಯಾವುದು ?<br>***ಉತ್ತರ :*** ಗೆಳೆಯರು ಯಾರೆಂದು ತಿಳಿದರೆ ವ್ಯಕ್ತಿಯು ಎಂಥವನೆಂದು ತಿಳಿಯಬಹುದು ಎಂಬುದು ಹಿರಿಯರ ನುಡಿ.<br>ಬಿ) ಎಲ್ಲಿ ಎಲ್ಲವೂ ಸಮಾನ ?<br>***ಉತ್ತರ :*** ಗೆಳೆತನದಲ್ಲಿ ಎಲ್ಲವೂ ಸಮಾನ<br>ಸಿ) ಬದುಕಿನಲ್ಲಿ ಸುಕೃತ ಫಲವಾವುದು ?<br>***ಉತ್ತರ :*** ಬದುಕಿನಲ್ಲಿ ಒಳ್ಳೆಯ ಗೆಳೆಯನ ಸಂಪಾದನೆಯೇ ಒಂದು ಸುಕೃತ ಫಲ.<br>ಡಿ) ಗೆಳೆತನವು ಯಾವುದರಿಂದ ನಮ್ಮನ್ನು ದೂರವಿಡುತ್ತದೆ ?<br>***ಉತ್ತರ :*** ಗೆಳೆತನವು ನಮ್ಮನ್ನು ನೋವು–ಸಂಕಟಗಳಿಂದ ದೂರವಿಡುತ್ತದೆ. | |
| XII. | **ಪ್ರಬಂಧ ಬರೆವಣಿಗೆ :** | 1 × 4 = 4 |
| 37. | ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.<br>***ಅಥವಾ***<br>ರಾಷ್ಟ್ರೀಯ ಭಾವೈಕ್ಯ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 38. | ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ 'ಆದರ್ಶ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಮಹಿಮಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದ ಬಗ್ಗೆ ಮೈಸೂರಿನಲ್ಲಿರುವ ಗೆಳತಿ 'ಶ್ರಾವ್ಯಾ'ಳಿಗೆ ಒಂದು ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |